8. ಹರಾಜಿನಲ್ಲಿ ತಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಧಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮಿಷನರ ವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮಿಷನರವರಿಂದ ಸೈ॥ ಪೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟಿ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸುಳ್ಳು ಲಿತ್ಯಗಳಿಗೆ ಗವರ್ಣ ಮೆಂಟಿನವರು ಜವಾಬ್ದಾರ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಣಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಡಾ ಅಪ್ಪೀಲಿನಲ್ಲಿ ಆಗುವ ಫೈಸಲೆ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪಸೀಲ್. ಕಟ್ಟಡಗಳು. ಕಬ್ಜಾದಾರರ ಹೆಸರು.	ಅಂದಾಜು ಕಿಮ್ಮತ್ತು ರೂ.	ಜಮೀನು. ನಂಬರ್ ಆಫ್ ಜಮೀನಿನ ಹೆಸರು.	ಖುಷ್ಕಿ, ತರಿ, ಬಾಗಾಯಿತು, ಅಥವಾ ಬಾಗಾಯಿತು ಅಲ್ಲದ್ದು.	ವಿಸ್ತೀರ್ಣ.	ಟಕ್ಕಾರು.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
ಕೃಷ್ಣರಾಜಪೇಟೆ	ಹಳೆಹೆಬ್ಬಳ್ಳಿ	ಸರ್ವನಾಯ್ಕನಹಳ್ಳಿ	ಕಾಣಂದೂರ್ ಕೃಷ್ಣಪ್ಪನಾಯ್ಕರ್ ಮತ್ತು ದಾಸಾಚಾರ್ಯರು.	ಗ್ರಾಮ ಪೂರ್ತ.		ಖುಷ್ಕಿ, ತರಿ, ಬಾಗಾಯಿತು, ಪರಾಬ್ ಸಹ.	ಎ. ಗು. 688 17	ರೂ. ಆ. ಪೈ. 849 8 0.	ರೂ. ಆ. 7,390 11 — ಇನ್ ಕಂಟ್ರಿ ಬ್ಯೂರ್ಷ. 1 8 ಖರ್ಚು. 1,392 3

ಜವುತರ್ಫ್.
ಪೂರ್ವಕ್ಕೆ —ಎಡಹಳ್ಳಿ ಮತ್ತು ಬೆಳ್ಳಿಬಟ್ಟದ ಕಾವಲು ಗಡಿ.
ಪಶ್ಚಿಮಕ್ಕೆ —ಕುರ್ನೇನಹಳ್ಳಿ ಗಡಿ.
ದಕ್ಷಿಣಕ್ಕೆ —ಮುದವನಕೂಡಿ ಮತ್ತು ಬೆಳ್ಳಿಬಟ್ಟದಕಾವಲ್ ಗಡಿ
ಉತ್ತರಕ್ಕೆ —ಹೆರಣೇನಹಳ್ಳಿ ಗಡಿ.

ಸರ್ಕಾರಕ್ಕೆ ಸಾಲಿಯಾನಾ ಬರತಕ್ಕ ಲೋ॥ ಸೆಸ್ಸು 54—1—10 ಇದು ವಸೂಲು ಬಂದುಯಿದೆ ಬಾಕಿಯಿಲ್ಲ.

ಟಿ. ಕೆ. ಸುಂದರರಾಜೈಯ್ಯಂಗಾರ್,
ಫಾರ್ ಡೆಪ್ಯೂಟಿ ಕಮಿಷನರ್.

ಹರಾಜಿನ ಡಿಸ್ಟ್ರಿಕ್ಟ್.
ಇಸ್ತಿಹಾರ್ನಾಮೆ.

ತಾರೀಖು 25ನೇ ಜನವರಿ 1907ನೆ ಇಸವಿ.

ಆಲೂರು ಸಬ್ ತಾಲ್ಲೂಕು ಕುಂದೂರು ಹೋಬಳಿ ಜೋಡಿ ಸಮಸ್ತರಿಗೆ ಗ್ರಾಮವು ಜೋಡೀದಾರು ನಾರಣಾಚಾರ್ಯರು ವಗೈರೇರಿಂದ ಬರತಕ್ಕ ಜೋಡಿ ಬಾಕಿಗೋಸ್ಕರವಾಗಿ 1907ನೆ ಇಸವಿ ಮಾರ್ಚಿ ಮಾಹೆ 18ನೆ ತಾರೀಖು ಸೋಮವಾರ ದಿವಿ 11 ಘಂಟೆ ಲಾಗಾಯಿತು ಕುಂದೂರು ವೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚಿ ತಪಸೀಲ್ ಬಗ್ಗೆ 1907ನೆ ಇಸವಿ ಜನವರಿ 31ನೆ ಮರ್ತ್ಯಂ ಮೈಸೂರು ಗೆಜೆಟ್ಟಿನ 11ನೆ ಭಾಗದ 30—31ನೆ ಪುಟಗಳನ್ನು ನೋಡತಕ್ಕದ್ದು.

ಎಂ. ಎ. ನಾರಾಯಣಯ್ಯೈಯ್ಯಂಗಾರ್,
ಫಾರ್ ಡೆಪ್ಯೂಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟ್.
ಇಸ್ತಿಹಾರ್.

ತಾರೀಖು 21ನೆ ಜನವರಿ 1907.

ಮೈಸೂರು ಸೀಮೆಯ ಲೇಟ್ ಚೀಫ್ ಕಮಿಷನರವರಿಂದ ಕೊಡಲ್ಪಟ್ಟ ತಾರೀಖು 17—4—1867ನೆ ಮರ್ತ್ಯಂ 6ನೆ ನಂಬರು ಭೂಮಿಯಲ್ಲಿ ಹೂಳಲ್ಪಟ್ಟ ನಿಧಿಗಳ ಪತ್ತೆ ವಿಷಯಕವಾದ ಇಸ್ತಿಹಾರನ್ನು ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ —

ಶಿವಮೊಗ್ಗ ಡಿಸ್ಟ್ರಿಕ್ಟ್ ಶಿಕಾರಿಪುರದ ತಾಲ್ಲೂಕು ಹುಣಸೆಕೊಪ್ಪದ ಗ್ರಾಮದಲ್ಲಿ ಸರಕಾರಿ ಜಾಗದಲ್ಲಿರುವ ಒಂದು ಹುಣಸೆಮರವನ್ನು ಬುಡವಲ್ಲಿ ಈ ಕೆಳಗೆ ನಮೂದಾಗಿರುವ ಸುಮಾರು 909 ರೂಪಾಯಿ 8 ಆಣೆ ಬೆಲೆ ಉಳ್ಳ ನಿಧಿಯು ತಾರೀಖು 16-12-06ರಲ್ಲಿ ಶಿಕ್ಕಿತು:—

ಶಿಕ್ಕಿದ ವಡವೆ.

	ಅಂದಾಜು ಬೆಲೆ. ರೂ.	ಆ.	ಪೈ.
38 ಚಿನ್ನದ ನಾಣ್ಯಗಳು	338	0	0
ಒಂದು ಭಂಗಾರದ ಸಂಗ	105	0	0
ಒಂದು ಜೊತೆ ಬಿಳ್ಳಿ ಬಳೆ	48	0	0
ಎರಡು ಭಂಗಾರದ ಹೊನ್ನೂವು	12	0	0
ಡಿಟೋ ಡಿಟೋ	9	0	0
ಒಂದು ಚಿನ್ನದ ಕರಡಿಗೆ	264	0	0
ಒಂದು ಡಿಟೋವಿನ ಭಂಗಾರದ ಪಟ್ಟಗೆ	10	0	0
ಒಂದು ಭಂಗಾರದ ಜವಂತಿಗೆ ಹುವ್ವು	60	0	0
ಒಂದು ಜೊತೆ ಕಾಶಿತಾಳಿಗುಂಡು	6	0	0
ಒಂದು ಜೊತೆ ಭಂಗಾರದ ಜಳತುಂಬು	9	0	0
ಒಂದು ಜೊತೆ ಭಂಗಾರದ ಕಪ್ಪ	15	0	0
ಒಂದು ಭಂಗಾರದ ಬಾಕ	16	0	0
ಒಂದು ಭಂಗಾರದ ವಾಲೆಕಲಕ	16	0	0
ಒಂದು ಭಂಗಾರದ ಖುಗುಡಿ ಕಲಕ	1	8	0
	909	8	0

2. ಸದರಿ ವಿಸಿಷ್ಟ ನಿಧಿಗೇ ಆಗಲಿ ಅಥವಾ ಅದರ ಒಂದು ಭಾಗಕ್ಕಾಗಲಿ ಹಕ್ಕುದಾರರೆಲ್ಲರು ಅವರಿಗೆ ಇರತಕ್ಕ ಹಕ್ಕನ್ನು ಸ್ಥಾಪಿಸಿಕೊಳ್ಳತಕ್ಕ ಬಗ್ಗೆ ಖುದ್ದಾಗಿಯಾಗಲಿ, ವಿಜಂಟರ ಮೂಲಕವಾಗಿಯಾಗಲಿ ಶಿವಮೊಗ್ಗ ಡಿಸ್ಟ್ರಿಕ್ಟ್ ಡಿಪ್ಯುಟಿ ಕಮಿಷನರ ವರ ಆಫೀಸಿನಲ್ಲಿ 1907ನೆ ಇಸವಿ ಆಗಸ್ಟ್ 3ನೆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಹಾಜರಾಗಬೇಕು.

ಏಂ. ನಾರಾಯಣರಾವ್,
ಡಿಪ್ಯುಟಿ ಕಮಿಷನರ್.

ತಾರೀಖು 30ನೆ ಜನವರಿ 1907.

ಸನ್ 1907ನೆ ಇಸವಿ ಮಾರ್ಚಿ ತಿಂಗಳ 16ನೆ ತಾರೀಖಿನಲ್ಲಿ ಪ್ರಾರಂಭವಾಗಿ ಒಂದು ವಾರದ ವರಿಗೂ, ಶಿವಮೊಗ್ಗ ತಾಲ್ಲೂಕು ಕೂಡ್ಲಿಯಲ್ಲಿ ನಡೆಯುವ ಶ್ರೀ ಸಂಗಮೇಶ್ವರ ದೇವರ ರಥೋತ್ಸವ ಕಾಲದಲ್ಲಿ ಗವರ್ನಮೆಂಟಿನಿಂದ ತಲ್ಪರುವ 22-12-06ನೆ ನಂಬರು ಕಂ 5540-1—L. F. 495-05—4ನೆ ನಂಬರ ಪ್ರೊಸಿಡಿಂಗ್ಸ್ ಪ್ರಕಾರ ಧನಗಳ ಪ್ರದರ್ಶನವು ನಡೆಯುತ್ತದೆ.

2. ದೇವಾಯಿಕಪುರದ ಬಳಿ ಹೊಳಹೊನ್ನೂರಿಗೆ ಹೋಗುವ ಹಳ್ಳೀ ರಸ್ತೆ ಬಳಿ ಇರುವ ತೋಪಿನಲ್ಲಿ ಪ್ರದರ್ಶನ ನಡಿಯಲು ಏರ್ಪಡಿಸುತ್ತೆ.

3. ಗಾಡಿ ಎತ್ತು ಜೊತೆ 1ಕ್ಕೆ ಮೊದಲನೇ ಬಹುಮಾನ 20 ರೂಪಾಯಿ, ಎರಡನೇ ಬಹುಮಾನ 10 ರೂಪಾಯಿ, ಉಳುವ ಎತ್ತು ಜೊತೆ 1ಕ್ಕೆ ಮೊದಲನೇ ಬಹುಮಾನ 20 ರೂಪಾಯಿ, ಎರಡನೇ ಬಹುಮಾನ 10 ರೂಪಾಯಿ. ಅತ್ಯುತ್ತಮವಾದ ಬೀಜದ ಹೋರಿ ಒಂದಕ್ಕೆ ಒಂದನೇ ಬಹುಮಾನ 15 ರೂಪಾಯಿ, ಅತ್ಯುತ್ತಮವಾದ ಹಸು 1ಕ್ಕೆ ಒಂದನೇ ಬಹುಮಾನ 15 ರೂಪಾಯಿ, ಅತ್ಯುತ್ತಮವಾದ ಎಮ್ಮೆ 1ಕ್ಕೆ ಒಂದನೇ ಬಹುಮಾನ 10 ರೂಪಾಯಿ, ಈ ರೀತಿ 7 ಬಹುಮಾನಗಳು ಕೊಡಲ್ಪಡುತ್ತವೆ.

4. ಬಹುಮಾನಗಳನ್ನು ಕೊಡಲು ಯೋಗ್ಯವಾದ ಜಾನುವಾರುಗಳನ್ನು ಆಯ್ಕೆಮಾಡಲು ಬಂದು ಕಮಿಟಿ ಏರ್ಪಡಿಸುತ್ತೆ. ಪ್ರದರ್ಶನ ಮುಗಿದ ಕೂಡ್ಲೆ ಇನಾಂ ಹಂಚಲ್ಪಡುತ್ತದೆ.

5. ಯಾವ್ದೇ ದ್ರವ್ಯರೂಪದ ಇನಾಂ ಅಲ್ಲದೆ ಬಂದು ಯೋಗ್ಯತಾ ಪತ್ರವು (certificate) ದೊರೆಯುತ್ತದೆ.

6. ಇನಾಂ ಪಡೆಯಲು ಅಯೋಗ್ಯವಾದ ಜಾನುವಾರು ಪ್ರದರ್ಶನಕ್ಕೆ ಬಾರದೆ ಇದ್ದಲ್ಲಿ ಸದರಿ ಇನಾಂ ಅನ್ಯಪಕ್ಷಕ್ಕೆ ಹೋಗಲಿ, ಅಥವಾ ಇನಾಮಿಗೆ ಅರ್ಹವಾದ ಇತರ ತರಗತಿ ಜಾನುವಾರುಗಳಿಗೆ ಕೊಡುವದಕ್ಕಾಗಲಿ ಕಮಿಟಿ ಮೆಂಬರುಗಳು ಅಧಿಕಾರವುಳ್ಳವರಾಗಿರುತ್ತಾರೆ.

7. ಜಾನುವಾರುಗಳನ್ನು ಪ್ರದರ್ಶನ ಮಾಡಲು ಇಷ್ಟವುಳ್ಳವರು, ಶಿವಮೊಗ್ಗ ತಾಲ್ಲೂಕು ಅನುಲ್ಯಾರ್ರವರಿಗೆ ಆಗಲಿ, ಅಥವಾ ಅವರ ಸೇವಕ ಮಾಡಲ್ಪಟ್ಟ ಇತರ ನೌಕರರಿಗೆ ಆಗಲಿ, ಪ್ರದರ್ಶನ ಶುರುವಾಗುವದಕ್ಕೆ ಮುಂಚಿತವಾಗಿ ಒಂದು ದಿವಸಕ್ಕೆ ಕಮ್ಮಿ ಇಲ್ಲದೆ ಅವಕಾಶವಿರುವಂತೆ, ಖರೀದು ತಮ್ಮ ಹೆಸರು ಜಾನುವಾರು ತಪಶೀಲು ದಾಖಲ್ಮಾಡಿಸಿಕೊಳ್ಳಬೇಕು.

8. ಪ್ರದರ್ಶನಕ್ಕೆ ಸೇರುವ ಜಾನುವಾರುಗಳಿಗಾಗಲಿ, ಅಥವಾ ಅವುಗಳಿಂದ ಜನಗಳಿಗೆ ಆಗಲಿ, ಯಾವ ಅಪಾಯವೂ ಸಂಭವಿಸದಂತೆ ಅವುಗಳ ಮಾಲೀಕರು ನೋಡಿಕೊಳ್ಳಬೇಕು.

9. ಸ್ಥಳದಲ್ಲಿ ಜಮಾಯಿಸಲಹದಾದ ರಾತ್ರಿಬ್ಬು ಜಾನುವಾರುಗಳಿಗೆ ಸಾಲದೇಹೋಗಬಹುದಾದ್ದರಿಂದ ಪ್ರದರ್ಶನದಲ್ಲಿ ಸೇರಿಸಬಹುದಾದ ಜಾನುವಾರುಗಳಿಗೆ ರಾತ್ರೀಬಿನ ಏರ್ಪಾಡು ಅವುಗಳ ಮಾಲೀಕರೇ ನೋಡಿಕೊಳ್ಳುವದು ಒಳ್ಳೇದು.

10. ಕೂಡ್ಲಿ ಜಾತ್ರೆಗೆ ಬಹಳ ಜನಗಳು ಮತ್ತು ಜಾನುವಾರು ಸೇರುವದರಿಂದ ವ್ಯಾಪಾರ ಬಹಳ ಚನ್ನಾಗಿ ನಡಿಯುತ್ತೆ.

ಏಂ. ನಾರಾಯಣರಾವ್,
ಡಿಪ್ಯುಟಿ ಕಮಿಷನರ್,
ಮತ್ತು
ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್.